MARCH 15, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- ***ಪ್ರಧಾನಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ:*** ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ, **ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ, ಭೂಮಿಪೂಜೆ.**
- **ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು,** ಮುಚ್ಚುವ ಪ್ರಶ್ನೆಯೇ ಇಲ್ಲ; ಶಾಲಾ ಶಿಕ್ಷಣ ಖಾತೆ ಸಚಿವರ, **ಸ್ಪಷ್ಟನೆ.**
- **ಧಾರವಾಡ** 'ಸಂಸದ್ ಖೇಲ್ ಮಹೋತ್ಸವ'; ಕೇಂದ್ರ ಸಚಿವರಾದ, ಮನ್‌ಸುಖ ಮಾಂಡವೀಯ ಹಾಗೂ ಪ್ರಲ್ಹಾದ ಜೋಶಿ, **ಭಾಗಿ.**
- **ಇಂದು, ವಿಶ್ವಗ್ರಾಹಕ ಹಕ್ಕುಗಳ,** ದಿನಾಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

***ಪ್ರಧಾನಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ***PM-USHAಯೋಜನೆಯಡಿ, 7 ಕೋಟಿ ರೂಪಾಯಿ ವೆಚ್ಚದಲ್ಲಿ, ಕೌಶಲ್ಯಾಭಿವೃದ್ಧಿ ಕೇಂದ್ರವನ್ನು, ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ, ನಿರ್ಮಿಸಲಾಗುತ್ತಿದೆ. ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ, ಪ್ರಿಯಾಂಕ ಖರ್ಗೆ, ಭೂಮಿಪೂಜೆ ನೆರವೇರಿಸಿದರು. ಬಳಿಕ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಸಚಿವರು, ಕಲ್ಯಾಣ ಕರ್ನಾಟಕ

ಭಾಗದ, ಯುವಜನತೆಯ ಕೌಶಲ್ಯಾಭಿವೃದ್ಧಿ ಹಾಗೂ ಅಧ್ಯಯನಕ್ಕೆ ಅಗತ್ಯವಾದ, ಆಧುನಿಕ ಸೌಲಭ್ಯಗಳನ್ನು ಒದಗಿಸುವ ಉದ್ದೇಶ, ಹೊಂದಲಾಗಿದೆ ಎಂದರು.

<><><>

**ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು,** ಮುಚ್ಚುವ ಪ್ರಶ್ನೆಯೇ ಇಲ್ಲ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ, ಸ್ಪಷ್ಟ ಪಡಿಸಿದ್ದಾರೆ. ಹಿರಿಯ ಸಾಹಿತಿ ವಿಜಯಶ್ರೀ ಅವರಸರ್ವಾಧ್ಯಕ್ಷತೆಯಲ್ಲಿ, ಶಿವಮೊಗ್ಗ ಜಿಲ್ಲೆಯ, ಸಾಹಿತ್ಯ ಗ್ರಾಮದಲ್ಲಿ ಆಯೋಜಿಸಿದ್ದ, 20ನೇ ಕನ್ನಡ ಸಾಹಿತ್ಯ ಸಮ್ಮೇಳನದ, ಸಮಾರೋಪ ಸಮಾರಂಭದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರೂ ಆದ, ಮಧು ಬಂಗಾರಪ್ಪ, ಪಾಲ್ಗೊಂಡು, ಮಾತನಾಡಿದರು. 3 ಸಾವಿರದ 500 ಕೋಟಿ ರೂಪಾಯಿ ವೆಚ್ಚದಲ್ಲಿ, ಸಾವಿರ ಕೆ.ಪಿ.ಎಸ್. ಶಾಲೆಗಳ ನಿರ್ಮಾಣಕ್ಕೆ, ಏಪ್ರಿಲ್ ಮಾಸಾಂತ್ಯಕ್ಕೆ, ಮುಖ್ಯಮಂತ್ರಿಯವರು, ಶಿವಮೊಗ್ಗದಲ್ಲಿ ಚಾಲನೆ ನೀಡಲಿದ್ದಾರೆ, ಎಂದರು.

<><><>

**ಮಧು ಬಂಗಾರಪ್ಪ ಧ್ವನಿ 56 ಸೆಕೆಂದುಗಳು**

<><><>

**ಸಾಹಿತ್ಯ ಸಮ್ಮೇಳನದಲ್ಲಿ,** ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್ ಅಧ್ಯಕ್ಷತೆಯಲ್ಲಿ ನಡೆದ, "ಕನ್ನಡ ಬಳಕೆ; ಸಾರ್ವಜನಿಕ ನಿರ್ಲಕ್ಷ್ಯ" ಗೋಷ್ಠಿಯಲ್ಲಿ, ಆಕಾಶವಾಣಿ ಬೆಂಗಳೂರು ಕೇಂದ್ರದ, ಪ್ರಾದೇಶಿಕ ಸುದ್ದಿ ವಿಭಾಗದ, ಸಹಾಯಕ ನಿರ್ದೇಶಕ, ತುಕಾರಾಮ ಗೌಡ ಜಿ. ಪಾಲ್ಗೊಂಡು, ಮಾತನಾಡಿದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ** ಅವರ, 'ಸ್ಟಾರ್ಟ್‌ಅಪ್ ಇಂಡಿಯಾ' ಕನಸಿಗೆ, **'TiECON 2026'**ಉತ್ತರ ಕರ್ನಾಟಕದ ಉದ್ಯಮಿಗಳಸಮಾವೇಶ, ಬಲ ತುಂಬುತ್ತಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಶ್ಲಾಘಿಸಿದ್ದಾರೆ. ಸಮಾವೇಶ ಉದ್ಘಾಟಿಸಿ, ಯುವ ಉದ್ಯಮಿಗಳೊಂದಿಗೆ ಸಂವಾದ ನಡೆಸಿದ ಅವರು, ಉತ್ತರ ಕರ್ನಾಟಕದ, ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಗೆ, ಟೈಕಾನ್ ಹೊಸ ವೇಗ ಮತ್ತು ದಿಕ್ಸೂಚಿಯಾಗಲಿದೆ. ಈ ಭಾಗದ ಯುವ ಪ್ರತಿಭೆಗಳು ಮತ್ತು ಉದ್ಯಮಿಗಳಿಗೆ ಜಾಗತಿಕ ನೆಟ್‌ವರ್ಕಿಂಗ್ ಹಾಗೂ ತಜ್ಞರ ಮಾರ್ಗದರ್ಶನ ಕಲ್ಪಿಸಿಕೊಡುವಲ್ಲಿ ಯಶಸ್ವಿಯಾಗಿದೆ ಎಂದರು.

<><><>

**ವಿಧಾನಸಭೆ ವಿಪಕ್ಷ ಉಪನಾಯಕ** ಅರವಿಂದ ಬೆಲ್ಲದ ಸೇರಿದಂತೆ, ಅನೇಕ ಗಣ್ಯರು, ಹೆಸರಾಂತ ಉದ್ಯಮಿಗಳು, ಪಾಲ್ಗೊಂಡಿದ್ದರು.

<><><>

**'ವಿಕಾಸದತ್ತ ಉತ್ತರ ಕರ್ನಾಟಕ'**, ಎಂಬ ಶೀರ್ಷಿಕೆಯಡಿ ಆಯೋಜಿತ ಸಮಾವೇಶ, ಇಂದು ಸಮಾರೋಪಗೊಳ್ಳಲಿದ್ದು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಟೈಕಾನ್ ಪದಾಧಿಕಾರಿ, ಧಾರವಾಡದ ಉದ್ಯಮಿ ವಿಶಾಲ ನಾಡಗೌಡ.

<><><>

**ಉದ್ಯಮಿ ವಿಶಾಲ ನಾಡಗೌಡ ಧ್ವನಿ 55 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕಾನೂನು ಸೇವಾ ಪ್ರಾಧಿಕಾರ** ಆಯೋಜಿಸಿದ್ದ, ರಾಷ್ಟ್ರೀಯಲೋಕ ಅದಾಲತ್ ನಲ್ಲಿ, ಧಾರವಾಡ ಉಚ್ಚ ನ್ಯಾಯಾಲಯದ, ಮೂರು ಪೀಠಗಳಲ್ಲಿ, 186 ಪ್ರಕರಣಗಳನ್ನು ಇತ್ಯರ್ಥಪಡಿಸಿ, 5 ಕೋಟಿ 97 ಲಕ್ಷ 95 ಸಾವಿರ ರೂಪಾಯಿ, ಪರಿಹಾರ ನಿಗದಿ ಪಡಿಸಿ, ಆದೇಶ ಹೊರಡಿಸಲಾಗಿದೆ ಎಂದು, ಕಾನೂನು ಸೇವಾ ಸಮಿತಿ ಕಾರ್ಯದರ್ಶಿ, ಜರಾಲ್ಡ್ ರೂಡಾಲ್ಫ್ ಮೆಂಡೋಸಾ, ತಿಳಿಸಿದ್ದಾರೆ. ಧಾರವಾಡ ಉಚ್ಚ ನ್ಯಾಯಾಲಯದ, ಹಿರಿಯ ನ್ಯಾಯಮೂರ್ತಿ, ಬಿ.ಎಂ. ಶ್ಯಾಮಪ್ರಸಾದ ನೇತೃತ್ವದಲ್ಲಿ, ನ್ಯಾಯಮೂರ್ತಿಗಳಾದ ಅಶೋಕ ಕಿಣಗಿ, ರವಿ ಹೊಸಮನಿ ಹಾಗೂ ಗೀತಾ ಕೆ.ಬಿ., 807 ಪ್ರಕರಣಗಳನ್ನು ವಿಚಾರಣೆಗೆ ಕೈಗೆತ್ತಿಕೊಂಡು, 186 ಪ್ರಕರಣಗಳನ್ನು ಇತ್ಯರ್ಥಪಡಿಸಿ, ಕಕ್ಷಿದಾರರಿಗೆ ನ್ಯಾಯ ಒದಗಿಸಿದ್ದಾರೆ.

<><><>

**'ಫಿಟ್ ಇಂಡಿಯಾ; ಖೇಲೋ ಇಂಡಿಯಾ'** ಉಪಕ್ರಮದಡಿ, 'ಸಂಸದ್ ಖೇಲ್ ಮಹೋತ್ಸವ'ದ ಅಂಗವಾಗಿ, ಧಾರವಾಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಯೋಜಿತ, ರಾಷ್ಟ್ರೀಯ ಕುಸ್ತಿ ಪಂದ್ಯಾವಳಿಯ, ಅಂತಿಮ ಹಂತದ ಪಂದ್ಯಗಳು, ಗುಡುಗು–ಸಿಡಿಲಿನ ಆರ್ಭಟದ ಆಲಿಕಲ್ಲಿನ ರಭಸದ ಮಳೆಯ ಹಿನ್ನೆಲೆ, ಧಾರವಾಡದ ಕರ್ನಾಟಕ ಕಾಲೇಜು ಮೈದಾನದಲ್ಲಿ, ಸ್ಥಗಿತಗೊಂಡವು. 83 ಜೋಡಿ ಪುರುಷ ಕುಸ್ತಿಪಟುಗಳು ಹಾಗೂ 7 ಜೋಡಿ ಮಹಿಳಾ ಕುಸ್ತಿಪಟುಗಳು, ಎರಡು ದಿನಗಳ ಪಂದ್ಯಾವಳಿಯಲ್ಲಿ, ಪ್ರಶಸ್ತಿಗಾಗಿ ಸೆಣೆಸಿದರು. ಕೇಂದ್ರ ಯುವಜನಸೇವೆ ಹಾಗೂ ಕ್ರೀಡಾ ಖಾತೆ ಸಚಿವ, ಮನ್ಸುಖ್ ಮಾಂಡವೀಯ, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ,

ಪ್ರಲ್ಹಾದ ಜೋಶಿ ಪಾಲ್ಗೊಂಡು, ರಾಷ್ಟ್ರ, ರಾಜ್ಯ ಹಾಗೂ ಸ್ಥಳೀಯ ಕುಸ್ತಿಪಟುಗಳನ್ನು, ಹುರಿದುಂಬಿಸಿದರು.

<><><>

**ಧಾರವಾಡ ಲೋಕಸಭಾ ಕ್ಷೇತ್ರದ** ಸಂಸದ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಈ ಸಂದರ್ಭದಲ್ಲಿ ಮಾತನಾಡಿದರು..

<><><>

**ಪ್ರಲ್ಹಾದ ಜೋಶಿ ಧ್ವನಿ 35 ಸೆಕೆಂದುಗಳು**

<><><>

**"ಸುರಕ್ಷಿತ ಉತ್ಪನ್ನಗಳು; ಆತ್ಮವಿಶ್ವಾಸದ ಗ್ರಾಹಕರು"**, ಧ್ಯೇಯದೊಂದಿಗೆ ಇಂದು, ವಿಶ್ವಗ್ರಾಹಕ ಹಕ್ಕುಗಳ, ದಿನಾಚರಣೆ. ಗ್ರಾಹಕರ ಹಕ್ಕುಗಳು ಮತ್ತು ಅಗತ್ಯತೆಗಳ ಕುರಿತು, ಜಾಗತಿಕವಾಗಿ ಜಾಗೃತಿ ಮೂಡಿಸುವ, ದಿನ. ಗ್ರಾಹಕರ ಹಕ್ಕುಗಳನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು. ಗ್ರಾಹಕರ ಹಕ್ಕುಗಳನ್ನು ದುರ್ಬಲಗೊಳಿಸುವ, ಮಾರುಕಟ್ಟೆಯ ದುರುಪಯೋಗ ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರತಿಭಟಿಸಲು, ವಿಶ್ವ ಸಂಸ್ಥೆ, ಮೀಸಲಿರಿಸಿದ ದಿನ. *ಕಂನ್ಸ್ಯುಮರ್ಸ್ ಇಂಟರ್‌ನ್ಯಾಶನಲ್ ಫೋರಂ,* 2026ರ ಗ್ರಾಹಕರ ಹಕ್ಕುಗಳ ದಿನಾಚರಣೆಯಂದು, 'ಉತ್ಪನ್ನಗಳ ಸುರಕ್ಷತೆ, ಪ್ರಮುಖ ಮಾನವ ಹಕ್ಕು' ಎಂಬ ಅಭಿಯಾನ ಹಾಗೂ ಡಿಜಿಟಲ್ ಮಾರುಕಟ್ಟೆಯಲ್ಲಿ, ಬಲವಾದ ನಿಯಮಗಳ ಅನುಷ್ಠಾನವನ್ನು, ಖಾತ್ರಿಪಡಿಸಲು ಒತ್ತಾಯಿಸಿದೆ.

<><><>

**ನಿಧನ ವಾರ್ತೆ**

<><><>

**ಧಾರವಾಡದ ಕರ್ನಾಟಕ ಮಹಾವಿದ್ಯಾಲಯ,** ಕೆ.ಸಿ.ಡಿ.ಯನ್ನು, ಶೈಕ್ಷಣಿಕವಾಗಿ ಕಟ್ಟಿಬೆಳೆಸಿದ, ಪ್ರಾಚಾರ್ಯೆ ಪ್ರೊಫೆಸರ್ ಉಷಾ ಮೂರ್ತಿ, ನಿನ್ನೆ ಧಾರವಾಡದಲ್ಲಿ ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು. ಪಾರ್ಥಿವ ಶರೀರದ ಅಂತ್ಯಕ್ರಿಯೆ ನಿನ್ನೆ ರಾತ್ರಿ, ಧಾರವಾಡದಲ್ಲಿ ನೆರವೇರಿತು. ಮೂಲತಃ ತಮಿಳುನಾಡಿನವರಾದ, ಪ್ರೊಫೆಸರ್ ಉಷಾ ಮೂರ್ತಿ, ಮದ್ರಾಸ್ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ, ಹೊಸ ದಿಲ್ಲಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಶನ್ ಸಂಸ್ಥೆಯಿಂದ, ಪಿಎಚ್.ಡಿ ಪದವಿ ಪಡೆದವರು. 1961 ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಆರಂಭಿಸಿದ, ಉಷಾ ಮೂರ್ತಿ, 1997 ರಲ್ಲಿ ಪ್ರಾಚಾರ್ಯರಾಗಿ ನಿವೃತ್ತರಾದರು. ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆಯ,** ಭದ್ರಾ ಅಭಯಾರಣ್ಯ ವ್ಯಾಪ್ತಿಯ, ಮುತ್ತೊಡಿ ಅರಣ್ಯ ಪ್ರದೇಶದ, ಹೊಸಖಾನ್, ಎಮ್ರಹಳ್ಳಿ ಭಾಗಗಳಲ್ಲಿ, ಕಾಡ್ಗಿಚ್ಚು ಹಬ್ಬಿ, ಅಪಾರ ಪ್ರಮಾಣದ ಅರಣ್ಯ ನಾಶವಾಗಿರುವ, ಸಾಧ್ಯತೆ ಇದೆ. ಪ್ರಬಲ ಗಾಳಿ ಹಾಗೂ ಪ್ರಖರ ಬಿಸಿಲಿಗೆ, ನೂರಾರು ಕಿಲೋ ಮೀಟರ್ ವರೆಗೆ, ಬೆಂಕಿ ವ್ಯಾಪಿಸಿದೆ. ಭದ್ರಾ ಅಭಯಾರಣ್ಯ, ಕಾಡಾನೆ, ಹುಲಿ, ಚಿರತೆ, ಜಿಂಕೆ ಸೇರಿದಂತೆ, ನೂರಾರು ಪ್ರಬೇಧದ ಪಕ್ಷಿಗಳ ಆವಾಸಸ್ಥಾನ. ಅಪರೂಪದ ಸಸ್ಯ ಸಂಕುಲಕ್ಕೆ ಬೆಂಕಿ ತಗುಲಿದ್ದು, ಅಪಾರ ಪ್ರಮಾಣದಲ್ಲಿ ನ ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ, ಕ್ಷಿಪ್ರ ಕಾರ್ಯಪಡೆಯೊಂದಿಗೆ ತೆರಳಿ, ಕಾಡ್ಗಿಚ್ಚು ನಂದಿಸಲು, ಪ್ರಯತ್ನಿಸುತ್ತಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- ***ಪ್ರಧಾನಮಂತ್ರಿ ಉಚ್ಛತರ್ ಶಿಕ್ಷಾ ಅಭಿಯಾನ;*** ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ, ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ, ಭೂಮಿಪೂಜೆ.
- **ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು,** ಮುಚ್ಚುವ ಪ್ರಶ್ನೆಯೇ ಇಲ್ಲ; ಶಾಲಾ ಶಿಕ್ಷಣ ಖಾತೆ ಸಚಿವರ, ಸ್ಪಷ್ಟನೆ.
- **ಧಾರವಾಡ** 'ಸಂಸದ್ ಖೇಲ್ ಮಹೋತ್ಸವ'; ಕೇಂದ್ರ ಸಚಿವರಾದ, ಮನ್ಸುಖ ಮಾಂಡವೀಯ ಹಾಗೂ ಪ್ರಲ್ಹಾದ ಜೋಶಿ, ಭಾಗಿ.
- **ಇಂದು, ವಿಶ್ವಗ್ರಾಹಕ ಹಕ್ಕುಗಳ,** ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>